ಬೇಕಾಗಿದೆ. ಇವತ್ತಿನದಿವಸ ಮಾನ್ಯ ವಿರೋಧಪಕ್ಷದ ನಾಯಕರು ಆ ವಿಚಾರವನ್ನು ಇನ್ನೂ ಉಲ್ಬಣ ಸ್ಥಿತಿಯಲ್ಲಿ ತೆಗೆದುಕೊಂಡು ಹೋಗಬಾರದು. ಅದನ್ನು ಬೇರೆ ರೀತಿಯಲ್ಲಿ ಇಲ್ಲಿ ಚರ್ಚೆ ಮಾಡುವುದಕ್ಕೆ ತಾವು ಅವಕಾಶವನ್ನು ಕಲ್ಪಿಸಿಕೊಡುತ್ತೀರೆಂದು ಆಶ್ವಾಸನೆಯನ್ನು ಕೊಟ್ಟಿದ್ದೀರಿ.

ಅಧ್ಯಕ್ಷರು : ನಾನು ಹೇಳದೇ ಇರುವುದನ್ನೆಲ್ಲಾ ನಾನು ಹೇಳಿದೆ ಎಂದು ಹೇಳಬಾರದು. ನನಗೆ ಇಲ್ಲಿ ಕೆಲವು ನೋಟೀಸುಗಳು ಬಂದಿವೆ. ರೂಲ್ 59 ರ ಪ್ರಕಾರ ಅದನ್ನು ಪರಿಶೀಲನೆ ಮಾಡುತ್ತೇನೆಂದು ಹೇಳಿದ್ದೆ.

ಶ್ರೀ ಎಂ. ಎಸ್ ಕೃಷ್ಣನ್ : ರೂಲ್ 59ರ ಪ್ರಕಾರ ಅದನ್ನು ಅಲ್ಲಿ ಚರ್ಚೆ ಮಾಡಬೇಕೆಂದು ನಾನು ತಮಗೆ ನೋಟಿಸ್ ಕೊಟ್ಟಿದ್ದು.

MR. SPEAKER.—I have said that I will just consider. That is all what I have said.

ಶ್ರೀ ಎಂ. ಎಸ್. ಕೃಷ್ಣನ್ : ರೂಲ್ 59ರ ಪ್ರಕಾರ ಇದನ್ನು ಚರ್ಚೆ ಮಾಡಬೇಕಾಗಿದೆ. You may agree or not agree. That is a different matter. If you agree, what will be the position is another matter. Since the opposition wants to create an atmosphere where there is peace, calmness, so that this House can function in a proper manner, I want to know whether the Chair can reconsider the action already taken.

MADAM SPEAKER.—They have regretted for it. They say it was not their intention to go against the Speaker. Let us leave it at that.

NON-PAYMENT OF SALARIES TO PRIMARY SCHOOL TEACHERS IN THE STATE

ಶ್ರೀ ಬಿ. ಪುಟ್ಟಸ್ವಾಮಯ್ಯ (ರಾಮನಗರಂ).— ಮೈಸೂರು ರಾಜ್ಯದಲ್ಲಿರ ತಕ್ಕ ಪ್ರಾಥಮಿಕ ಉಪಾಧ್ಯಾಯರಲ್ಲಿ ಸುಮಾರು ಒಂದು ಲಕ್ಷ ಉಪಾಧ್ಯಾಯರಿಗೆ ಸುಮಾರು ಮೂರು ನಾಲ್ಕು ತಿಂಗಳುಗಳಿಂದಲೂ ಸಂಬಳವಿಲ್ಲ, ಇದರ ಬಗ್ಗೆ ಕೆಲವರು ಎಲ್ಲಿ ಹೋಗಿ ರಿಪೋರ್ಟ್ ಮಾಡಬೇಕು ಎಂಬುದಾಗಿ ಕೇಳುತ್ತಿದ್ದಾರೆ. ನಾವು ಅಹಿಕೆವಾಗಿ ಅವರನ್ನು ವರ್ಗಾವಣೆ ಮಾಡಿದಮೇಲೆ ಅವರು ಯಾವ

(ಶ್ರೀ ಬಿ. ಪುಟ್ಟಸ್ವಾಮಯ್ಯ)

ಕೋರ್ಟಿಗೆ ಹೋಗಬೇಕು, ಹೈಕೋರ್ಟಿಗೆ ಹೋಗಬೇಕೋ ಅಥವಾ ಸುಪ್ರೀಂ ಕೋರ್ಟಿಗೆ ಹೋಗಬೇಕೋ ಎಂದು ಕೇಳುತ್ತಿದ್ದಾರೆ. ಅವರೆಲ್ಲರೂ ಈಗ ಬಹಳ ತೊಂದರೆಯಲ್ಲಿರುವುದರಿಂದ ಅನೇಕರು ಈಗಾಗಲೇ ಕೋರ್ಟಿಗೆ ಹೋಗಬೇಕಾಗಿ ಬಂತು. ಕೋರ್ಟಿನಲ್ಲಿ ಉಪಾಧ್ಯಾಯರ ಪರ ತೀರ್ಮಾನವಾಗಿದ್ದರೂ, ಸುಪ್ರೀಂ ಕೋರ್ಟಿನಲ್ಲಿ ಇದರ ಬಗ್ಗೆ ಸ್ಪೆಷಲ್ ಆಗಿದ್ದರೂ ಸಹ ಸರ್ಕಾರ ಇದರ ಬಗ್ಗೆ ಗಮನ ಕೊಡದೆ ಇರುವುದರಿಂದ ಅನೇಕ ಜನ ಉಪಾಧ್ಯಾಯರು ವರ್ಗವಾಗಿದ್ದಾರೆ. ಅವರಿಗೆ ಅಲ್ಲಿ ಸರಿಯಾದ ಸ್ಥಳವಿಲ್ಲ ಈ ವಿಷಯದಲ್ಲಿ ಸರ್ಕಾರದವರು ಏನು ಮಾಡಿದ್ದಾರೆಂಬುದನ್ನು ಈ ಸಭೆಯಲ್ಲಿ ತಿಳಿಸಬೇಕು.

ಅಧ್ಯಕ್ಷರು :— ಮಾನ್ಯ ಶ್ರೀ ಕೃಷ್ಣಪ್ಪನವರು ಇದರ ಬಗ್ಗೆ ಒಂದು ನೋಟೀಸನ್ನು ನನಗೆ ಕಳುಹಿಸಿಕೊಟ್ಟಿದ್ದಾರೆ ಅದನ್ನು ಕಾಲ್ ಅಟೆನ್‌ಷನ್ ನೋಟೀಸಾಗಿ ಪರಿಗಣಿಸಿ ಅದರ ಬಗ್ಗೆ ಉತ್ತರವನ್ನು ಜಾಗ್ರತೆಯ್ಯಾಗಿ ಕಳುಹಿಸ ಬೇಕೆಂದು ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇನೆ.

ಶ್ರೀ ಬಿ. ಪುಟ್ಟಸ್ವಾಮಯ್ಯ : ಇದು ಬಡ ಜನರ ವಿಷಯ. ಅಭಾವ ಕಾಲದಲ್ಲಿ ಸುಮಾರು ಮೂರು ನಾಲ್ಕು ತಿಂಗಳುಗಳಿಂದಲೂ ಅವರಿಗೆ ಸಂಬಳ ವಿಲ್ಲದಿದ್ದರೆ ಅವರಿಗೆ ಎಷ್ಟು ತೊಂದರೆಯಾಗುತ್ತದೆಂಬುದನ್ನು ಯೋಚಿಸಬೇಕು.

ಅಧ್ಯಕ್ಷರು : ಹೇಳಿದ್ದನ್ನೇ ಹೇಳುವುದು ಸರಿಯಲ್ಲ

ಶ್ರೀ ಬಿ. ಪುಟ್ಟಸ್ವಾಮಯ್ಯ : ಅವರು ಬಹಳ ಬಡವರು. ಮನೆಯಲ್ಲಿ ಅವರಿಗೆ ರೇಶನ್ ಸಹ ಸಿಗದೆ ತೊಂದರೆಯಾಗುತ್ತದೆ.

ಅಧ್ಯಕ್ಷರು : ಈ ಕಾಲದಲ್ಲಿ ರೇಷನ್ನಿಗೆ ಎಲ್ಲರಿಗೂ ಕಷ್ಟ ಇದೆ.

OPERATION OF RELIEF MEASURES IN DROUGHT HIT AREAS

ಶ್ರೀ ಬಾಪುಗೌಡ ರಾಮಪ್ಪ.—ಗುಲ್ಬರ್ಗ, ರಾಯಚೂರು ಮತ್ತು ಬೀದರ್ ಜಿಲ್ಲೆಗಳಲ್ಲಿ ಕ್ಷಾಮಪೀಡಿತ ಪ್ರದೇಶಗಳಲ್ಲಿ ರಿಲೀಫ ಕಾಮಗಾರಿಗಳು ನಿಂತು ಹೋಗಿವೆ. ಇದರಿಂದಾಗಿ ಸುಮಾರು ಒಂದು ಸಾವಿರ ಜನ ಗ್ರಾಜುಯೇಟ್ಸ್, ಇಂಜನಿಯರ್‌ಗಳು ಮತ್ತು ಡಿಪ್ಲೋಮಾ ಹೋಲ್ಡರುಗಳು ನಿರುದ್ಯೋಗಿಗಳಾಗಿದ್ದಾರೆ. ಆದ್ದರಿಂದ ಈ ಬಗ್ಗೆ ನಾನು ಒಂದು ನೋಟಿಸನ್ನು ತಮಗೆ ಕಳುಹಿಸಿದ್ದೆ.

ಅಧ್ಯಕ್ಷರು : ನಾನು ಅದನ್ನು ಸರ್ಕಾರಕ್ಕೆ ಕಳುಹಿಸಿದ್ದೇನೆ. ಅದಕ್ಕೆ ಸರ್ಕಾರದವರು ಜವಾಬು ಕೊಡುತ್ತಾರೆ.